1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**21/2022**

ಹೆಸರುಃ ಬಸವರಾಜಪ್ಪ ಚಾಸಾಃ 9

ತಂದೆಃ ಹನುಮಂತಪ್ಪ ಫ್ರಾಸಾ: 9

ವಯಸ್ಸುಃ 46

ಉದ್ಯೋಗಃ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಎಲೆಕ್ಟ್ರಿಷಿಯನ್,

ವಾಸ ಸ್ಥಳಃ ದೇವರಹಳ್ಳಿ ಗ್ರಾಮ ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 16-09-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 29-08-2021 ರಂದು ಗೋಪ್ಪೇನಹಳ್ಳಿಯಲ್ಲಿ ಇರುವ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅದೇ ದಿನ ಚಾಸಾ 8 ರವರ ಜೊತೆ ಸಂಜೆ ಕರ್ತವ್ಯ ಮುಗಿದ ನಂತರ ಕಛೇರಿಗೆ ಬೀಗ ಹಾಕಿಕೊಂಡು ಮನೆಗೆ ಹೋದೆನು .

ಮಾರನೇ ದಿನ ದಿಃ 30-08-2021 ರಂದು ನಾನು ಚಾಸಾ 8 ರವರ ಜೊತೆ ಕಛೇರಿಗೆ ಹಿಂದಿರುಗಿದಾಗ ಹಿಂದಿನ ರಾತ್ರಿ ಸುಮಾರು 12.00 ಗಂಟೆಯ ಸಮಯದಲ್ಲಿ ಯಾರೋ ಕಳ್ಳರು ಕಛೇರಿಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಕಛೇರಿಯ ಒಳಗೆ ಪ್ರವೇಶ ಮಾಡಿ 7 ಮೀಟರ್ ಉದ್ದದ ಕಾಪರ್ ಕೇಬಲ್ ನ್ನು ಕಳ್ಳತನ ಮಾಡಿ ಹೋಗಿರುತ್ತಾರೆ ಎಂದು ಚಾಸಾ 1 ರವರಿಗೆ ತಿಳಿಸಿರುತ್ತೇನೆ . ಚಾಸಾ 1 ರವರು ನಂತರ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ . ಈ ವಿಚಾರ ವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ .

ಪೊಲೀಸರು ಆರೋಪಿಯನ್ನು ದಿಃ 20-10-2021 ರಂದು ಕಛೇರಿಗೆ ಕರೆದುಕೊಂಡು ಬಂದಿರುತ್ತಾರೆ . ನಂತರ ಆರೋಪಿಯನ್ನು ಪೊಲೀಸರು ನನಗೆ ತೋರಿಸಿ ಇವನೇ ಕಳ್ಳತನ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ . ಆರೋಪಿಯ ಹೆಸರು ಸುರೇಶ್

ಎಂದು ತಿಳಿಸಿರುತ್ತಾರೆ . ಜಿಟ್ಸಿ ಮೀಟ್ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು ಈಗ ತೋರಿಸಿದ್ದು ಸಾಕ್ಷಿಯು ಅವರನ್ನು ಗುರುತಿಸಿರುತ್ತಾರೆ . ಸ್ಥಳ ಪಂಚನಾಮೆಯನ್ನು ಆರೋಪಿಯನ್ನು ಕರೆದು ತಂದು ಮಾಡಿರುತ್ತಾರೆ .ಸದರಿ ವಿಚಾರವಾಗಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ .

ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –

2021 ರಲ್ಲಿ ನಾನು ಚನ್ನಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ ಎಂದರೆ ಸರಿ . ಮರುಹೇಳಿಕೆಯನ್ನು ಯಾವ ದಿನ , ತಿಂಗಳು ಮತ್ತು ವರ್ಷದಲ್ಲಿ ನೀಡಿರುತ್ತೇನೆ ಎಂದು ನನಗೆ ಹೇಳಲಾಗುವುದಿಲ್ಲ . ಗೊಪ್ಪೇನಹಳ್ಳಿಯಲ್ಲಿ ಇರುವ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಲು ಕಛೇರಿಯಿಂದ ಯಾವುದೇ ಅಧೀಕೃತ ಪತ್ರವನ್ನು ನೀಡಿರುವುದಿಲ್ಲ . ಕಛೇರಿಯಲ್ಲಿ ನಡೆದ ಕಳ್ಳತನದ ಬಗ್ಗೆ ನಾನು ಚಾಸಾ 1 ರವರಿಗೆ ವಿಷಯ ಮುಟ್ಟಿಸಿರುತ್ತೇನೆ . ಬಿ.ಎಸ್.ಎನ್.ಎಲ್ ಕಛೇರಿಯ ಒಳಗೆ ಸುಮಾರು 60 ರಿಂದ 70 ಮೀಟರ್ ಉದ್ದದ ತಾಮ್ರದ ತಂತಿಗಳನ್ನು ಅಳವಡಿಸಿದ್ದರು , ಅದನ್ನು ನಾನು ಮರಹೇಳಿಕೆಯಲ್ಲಿ ತಿಳಿಸಿರುವುದಿಲ್ಲ . ನನ್ನ ಮೇಲಾಧಿಕಾರಿಗಳ ಮಾತನ್ನು ಕೇಳಿ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿಯನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ . ಮಹಜರ್ ಮಾಡಿದ ದಿನ, ತಿಂಗಳು ಮತ್ತು ವರ್ಷ ಹಾಗೂ ಸಮಯವನ್ನು ಹೇಳಲು ಆಗುವುದಿಲ್ಲ .

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**01** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ , ನ್ಯಾಯಾಧೀಶರವರ ನ್ಯಾಯಾಲಯ , ಚನ್ನಗಿರಿ .

ಸಿಸಿ ನಂ.**21/2022**

ಹೆಸರುಃ ಹರೀಶ್ ಚಾಸಾಃ 8

ತಂದೆಃ ನಾಗೇಂದ್ರಪ್ಪ ಫ್ರಾಸಾ: 8

ವಯಸ್ಸುಃ 36

ಉದ್ಯೋಗಃ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಎಲೆಕ್ಟ್ರಿಷಿಯನ್

ವಾಸ ಸ್ಥಳಃ ಮಾವಿನಕಟ್ಟೆ ಗ್ರಾಮ ಚನ್ನಗಿರಿ ತಾಲ್ಲೂಕು.

ಸಾಕ್ಷಿಗೆ ದಿನಾಂಕಃ 16-09-2022 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ದಿಃ 29-08-2021 ರಂದು ಗೋಪ್ಪೇನಹಳ್ಳಿಯಲ್ಲಿ ಇರುವ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅದೇ ದಿನ ಸಂಜೆ ಕರ್ತವ್ಯ ಮುಗಿದ ನಂತರ ಕಛೇರಿಗೆ ಬೀಗ ಹಾಕಿಕೊಂಡು ಮನೆಗೆ ಹೋದೆನು .

ಮಾರನೇ ದಿನ ದಿಃ 30-08-2021 ರಂದು ನಾನು ಕಛೇರಿಗೆ ಹಿಂದಿರುಗಿದಾಗ ಹಿಂದಿನ ರಾತ್ರಿ ಸುಮಾರು 12.00 ಗಂಟೆಯ ಸಮಯದಲ್ಲಿ ಯಾರೋ ಕಳ್ಳರು ಕಛೇರಿಯ ಕಿಟಕಿ ಗಾಜುಗಳನ್ನು ಹೊಡೆದು ಹಾಕಿ ಕಛೇರಿಯ ಒಳಗೆ ಪ್ರವೇಶ ಮಾಡಿ 7 ಮೀಟರ್ ಉದ್ದದ ಕಾಪರ್ ಕೇಬಲ್ ನ್ನು ಕಳ್ಳತನ ಮಾಡಿ ಹೋಗಿರುತ್ತಾರೆ ಎಂದು ಚಾಸಾ 1 ರವರು ನನಗೆ ತಿಳಿಸಿರುತ್ತೇನೆ . ಚಾಸಾ 1 ರವರು ನಂತರ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ . ಈ ವಿಚಾರ ವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ .

ಪೊಲೀಸರು ಆರೋಪಿಯನ್ನು ದಿಃ 20-10-2021 ರಂದು ಕಛೇರಿಗೆ ಕರೆದುಕೊಂಡು ಬಂದಿರುತ್ತಾರೆ . ನಂತರ ಆರೋಪಿಯನ್ನು ಪೊಲೀಸರು ನನಗೆ ತೋರಿಸಿ ಇವನೇ ಕಳ್ಳತನ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ . ಆರೋಪಿಯ ಹೆಸರು ಸುರೇಶ್ ಎಂದು ತಿಳಿಸಿರುತ್ತಾರೆ . ಜೆಟ್ಸಿ ಮೀಟ್ ವಿಡಿಯೋ ಕಾಲ್ ಮೂಲಕ ಆರೋಪಿಯನ್ನು

ಈಗ ತೋರಿಸಿದ್ದು ಸಾಕ್ಷಿಯು ಅವರನ್ನು ಗುರುತಿಸಿರುತ್ತಾರೆ . ಸ್ಥಳ ಪಂಚನಾಮೆಯನ್ನು ಆರೋಪಿಯನ್ನು ಕರೆದು ತಂದು ಮಾಡಿರುತ್ತಾರೆ .ಸದರಿ ವಿಚಾರವಾಗಿ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ .

ಪಾಟೀ ಸವಾಲು - ಆರೋಪಿತರ ಪರ ವಕೀಲರಿಂದ –

ನಾನು ಸುಮಾರು 4 -5 ವರ್ಷಗಳಿಂದ ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಕಛೇರಿಯಲ್ಲಿ ತಾಮ್ರದ ಎಷ್ಟು ಮೀಟರ್ ವೈರ್ ಅಳವಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸುಮಾರು ಬೆಳಗ್ಗೆ 10.00 ಗಂಟೆಯ ಸಮಯದಲ್ಲಿ ನಾನು ಕಛೇರಿಗೆ ಹೋಗಿರುತ್ತೇನೆ . ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ .

ದಿಃ 20-10-2021 ರಂದು ಮಹಜರ್ ಜರುಗಿಸಿರುತ್ತಾರೆ . ಬಿ.ಎಸ್.ಎನ್.ಎಲ್ ಕಛೇರಿಯಲ್ಲಿ ಜರುಗಿದ ಕಳ್ಳತನದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಕಛೇರಿಯಲ್ಲಿ ಕಳ್ಳತನವಾದ ತಾಮ್ರದ ವೈರ್ ನಿಂದ ನನಗೆ ತೊಂದರೆ ಉಂಟಾಗಬಹುದು ಎಂದು ಆರೋಪಿಯ ಮೇಲೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

**01** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,

ಚನ್ನಗಿರಿ.